ಒ.ಎಸ್.ನಂ.185 /2016 , ಪಿ.ಡಬ್ಲ್ಯೂ.03
ದಿನಾಂಕಃ- 4-6-2019

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ 4 ಮತ್ತು 5 ಪರ ವಕೀಲರಿಂದ

ಬೆಂಗಳೂರಿನ ಕೆ ಎಸ್ ಡಿ ಎಲ್ ಸಂಸ್ಥೆಯಲ್ಲಿ ಡಿ ಗ್ರೂಪ್ ನೌಕರನಾಗಿ ಕೆಲಸ ಮಾಡಿರುತ್ತೇನೆ. ಕೆ ಎಸ್ ಡಿ ಎಲ್ ಸಂಸ್ಥೆಯಲ್ಲಿ 1985 ರಿಂದ 2004 ರ ರವರಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯಿಂದ ದಾವಾ ಆಸ್ತಿ ಅರ್ಧ ಕಿ ಮಿ ದೂರದಲ್ಲಿ ಇದೆ. ದಾವಾ ಆಸ್ತಿಗೆ ಹೊಂದಿಕೊಂಡಂತೆ ನನಗೆ ಸೇರಿದ ಯಾವುದೇ ಆಸ್ತಿ ಇಲ್ಲ. ನನ್ನ ಮನೆಯ ಖಾತೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಸಂಖ್ಯೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಸರ್ಕಾರಿ ರಸ್ತೆ . ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಸರ್ಕಾರಿ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ರಸ್ತೆಯ ನಂತರ ಅಂಗಡಿ ಹಾಗೂ ಮನೆಗಳು ಇದೆ. ಸದರಿ ಅಂಗಡಿ ಮನೆಗಳು ಯಾರಿಗೆ ಸೇರಿದವುಎಂದರೆ ಸಾಕ್ಷಿ ತಿಮ್ಮಶೆಟ್ಟಿರವರ ಮನೆ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಸರ್ಕಾರಿ ಜಮೀನು ಇದ್ದು, ಅದನ್ನು ಗುಂಡು ತೋಪು ಎಂದು ಕರೆಯುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ ಸಂಜೀವಯ್ಯನ ಮನೆ. ದಾವಾ ಆಸ್ತಿಯ ದಕ್ಷಿಣಕ್ಕೆ ಸರ್ಕಾರಿ ಜಮೀನು, ಗುಂಡು ತೋಪು ಇದೆ. ಸದರಿ ಸರ್ಕಾರಿ ಜಮೀನು ಗುಂಡು ತೋಪು ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ಗೊತ್ತಿಲ್ಲ. ಸದರಿ ಗುಂಡುತೋಪಿನ ಒಳಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಾಜೂರು ಗ್ರಾಮ ಪಂಚಾಯತಿಗೆ ಸೇರಿದ ಮಾಳಿಗೆ ಮನೆಗಳು ಮತ್ತು ಗ್ರಂಥಾಲಯ ಇದೆ ಎಂದರೆ ಸರಿ . ಜಾಜೂರು ಗ್ರಾಮದ ಬಸ್ ನಿಲ್ದಾಣದ ವೃತ್ತ , ಗ್ರಾಮ ಪಂಚಾಯತಿ ಇದೆ ಎಂದರೆ ಸರಿ . ಸಾಕ್ಷಿ ಗ್ರಾಮ ಪಂಚಾಯತಿ ಈಗ ಬೇರೆ ಕಡೆ ಮಾಡಲಾಗಿದೆ. ಗ್ರಾಮ ಪಂಚಾಯತಿಯನ್ನು ಬೇರೆ ಕಡೆ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ವಾದಿಯ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿ ವಾದಿಯ ಹೆಸರಿಗೆ ಬಂದಿರುತ್ತದೆ. ವಾದಿಯ ತಾಯಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ಗೊತ್ತಿಲ್ಲ. ವಾದಿಯ ಅಣ್ಣ ತಮ್ಮಂದಿರು 3 ಜನ ಇದ್ದಾರೆ. ದಾವಾ ಆಸ್ತಿ ವಾದಿಯ ಹೆಸರಿಗೆ ಯಾವ ದಾಖಲಾತಿಗಳ ಮುಖೇನ ಬಂತು ಎಂದು ಗೊತ್ತಿಲ್ಲ. ದಾವಾ ಆಸ್ತಿ ವಿಸ್ತೀರ್ಣ

40 **X** **20** ಅಡಿ ಇದೆ. ದಾವಾ ಆಸ್ತಿ 40 **X** **20** ಅಡಿ ಇದೆ ಎಂದು ಇ-ಸೊತ್ತು ದಾಖಲಾತಿಯನ್ನು ನೋಡಿ ಹೇಳಿರುತ್ತೇನೆ. ದಾವಾ ಆಸ್ತಿ ವಾದಿಯ ಹೆಸರಿಗೆ ಖಾತೆ ಆದ ಬಗ್ಗೆ ಖಾತಾ ಎಕ್ಸ್‌ಟ್ರಾಕ್ಟ್‌ನ್ನು ನೋಡಿಲ್ಲ. ಇ-ಸೊತ್ತನ್ನು ನೋಡಿರುತ್ತೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿಯಿದೆ,

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರು
ಚಳ್ಳಕೆರೆ.